**<u>ಮೇ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

C.C.No.1529/2022
CW8/PW3

| | |
|---|---|
| ಹೆಸರು | ಶ್ರೀಶೈಲ ಅಕ್ಕಿಮರಡಿ |
| ತಂದೆಯ ಹೆಸರು | ಬಸಪ್ಪ |
| ವಯಸ್ಸು | 22 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಸಿದ್ದಾಪುರ ಗ್ರಾಮ. |

**ದಿನಾಂಕ: 03-12-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ :- ಎ.ಪಿ.ಪಿ ರವರಿಂದ.</u>**

ನನಗೆ ಆರೋಪಿತನ ಮತ್ತು ಮೃತ ವೆಂಕಪ್ಪನ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟೀ ಸವಾಲು :- ಎ.ಪಿ.ಪಿ ರವರಿಂದ.</u>**

ದಿನಾಂಕ 09.07.2022 ರಂದು ಮದ್ಯಾಹ್ನ 1-00 ಗಂಟೆ ಸುಮಾರಿಗೆ ಹಲಗಲಿ ಗ್ರಾಮದಿಂದ ಟ್ರಾಕ್ಟರ ನಂ.ಕೆಎ-48/ಟಿ-5774 ನೇದಕ್ಕೆ ಒಂದು ಟ್ರೇಲರನ್ನು ಜೋಡಿಸಿಕೊಂಡು ನಾನು ಹಾಗೂ ಮೃತ ವೆಂಕಪ್ಪ ಮತ್ತು ಚಾಸಾ-9 ಕೂಡಿಕೊಂಡು ಆರೋಪಿ ನಂ.1 ಚಲಾಯಿಸುತ್ತಿದ್ದ ಸದರಿ ಟ್ರಾಕ್ಟರದಲ್ಲಿಂದ ಮುಧೋಳಕ್ಕೆ ಬಂದು ಪೈಪಲೈನ ಕಾಮಗಾರಿಗೆ ಬೇಕಾದ ಸಾಮಾನುಗಳನ್ನು ಸದರಿ ಟ್ರಾಕ್ಟರ ಟ್ರೇಲರನಲ್ಲಿ ಲೋಡ ಮಾಡಿಕೊಂಡು ಮುಧೋಳ ರನ್ನ ಸರ್ಕಲದಿಂದ ಇಂಗಳಗಿ ರಸ್ತೆ ಹಿಡಿದು ಹೋಗುವಾಗ ಸದರಿ ಟ್ರಾಕ್ಟರನ್ನು ಆರೋಪಿ ನಂ.1 ಇವನು ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿ ನಂ.1 ರವರ ಬಲಗಡೆ ಮಗ್ಗಲು ಮೃತ ವೆಂಕಪ್ಪ ಕುಳಿತಿದ್ದನು ಮತ್ತು ನಾನು ಮತ್ತು ಚಾಸಾ-9 ಟ್ರೇಲರದಲ್ಲಿ ಕುಳಿತಿದ್ದೇವು ಎಂದರೆ ಸರಿಯಲ್ಲ. ನಂತರ ನಮ್ಮ ಟ್ರಾಕ್ಟರ ರನ್ನ ಸರ್ಕದಿಂದ ಜೀರಗಾಳ-ಮಾಲಾಪುರ ರಸ್ತೆಗೆ ಕೂಡಿ ಅಲ್ಲಿಂದ ಮಂಟೂರು ಕ್ರಾಸದಿಂದ ಮಂಟೂರು ರಸ್ತೆಯ ತೀರುವಿನಲ್ಲಿ ಆರೋಪಿ ನಂ.1 ಇವನು ಸದರಿ ಟ್ರಾಕ್ಟರನ್ನು ಅತೀ ವೇಗವಾಗಿ ಮತ್ತು ನೀಷ್ಕಾಳಜಿಯಿಂದ ಚಲಾಯಿಸಿ ಮಂಟೂರು ರಸ್ತೆಯ ಕಡೆಗೆ ಒಮ್ಮೆಗೆ ಹೊರಳಿಸಿ ಮಂಟೂರು ಕಡೆಗೆ ಹೋಗುವಾಗ ರೋಡ ಹಂಪ್ಸ ಮೇಲೆ ಅದೇ ವೇಗದಲ್ಲಿ ಹಾಯಿಸಿ ಜಿಗಿಸಿದಾಗ ಆರೋಪಿ ನಂ.1 ರವರ ಮಗ್ಗಲು ಕುಳಿತ ವೆಂಕಪ್ಪ ಇವನು ಜೊಲಿ ಹೋಗಿ ಟ್ರಾಕ್ಟರದಿಂದ ಕೇಳಗೆ ಬಿದ್ದನು ಆಗ ಅವನ ಮೇಲೆ ಟ್ರಾಕ್ಟರನ ಬಲಗಡೆಯ ದೊಡ್ಡ ಗಾಲಿ ಮತ್ತು ಟ್ರೆಲರದ ಬಲಗಡೆಯ ಎರಡು ಗಾಲಿಗಳು ಹಾಯ್ದು ಹೋದವು ಎಂದರೆ ಸರಿಯಲ್ಲ. ನಂತರ ನಾವೇಲ್ಲರೂ ಟ್ರಾಕ್ಟರದಿಂದ ಕೆಳಗೆ ಇಳಿದು ವೆಂಕಪ್ಪ ಇವನಿಗೆ ನೋಡಿದಾಗ

ಅವನಿಗೆ ಭಾರಿ ಹಾಗೂ ಸಾಧಾ ಸ್ವರೂಪದ ಗಾಯಗಳು ಆಗಿ ಅವನು ಸ್ಥಳದಲ್ಲಿಯೇ ಮರಣ ಹೊಂದಿದ್ದನು ಎಂದರೆ ಸರಿಯಲ್ಲ. ಸದರಿ ಅಪಘಾತವಾದಾಗ ಸಾಯಂಕಾಲ 4-15 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಈ ಪ್ರಕರಣದ ವಿಚಾರಣೆ ಕಾಲಕ್ಕೆ ನಾನು ದಿನಾಂಕ 10.07.2022 ರಂದು ಈಗ ನನಗೆ ಓದಿ ಹೇಳಿದ ಹಾಗೇ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ಈಗ ನಿಪಿ-8 ಎಂದು ಗುರುತಿಸಲಾಯಿತು.

ನಿಪಿ-8 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.05.12 10:46:10 +0530